ಜನ ಏನೆಂದಾರು? ಹೀಗೆ ಯೋಚಿಸುತ್ತಲೇ ಮಧ್ಯಾಹ್ನ ಕಳೆದು ಸಂಜೆ ಸಮೀಪಿಸುತ್ತಿತ್ತು. ಆತ ಇನ್ನೇನು ಬಂದಾನು. ಆಗಲೇ ಆಕೆಯ ನೆನಪಿಗೆ ಬಂತು. ಒಂದು ದಿನ ಆಕೆ ಪತಿಯ ಶರಾಬಿನ ಬಾಟಲನ್ನು ಆತನಿಗೆ ಗೊತ್ತಾಗದಂತೆ ಮನೆಯ ಹಿಂದೆ ಮಣ್ಣಿನಲ್ಲಿ ಗುಂಡಿತೋಡಿ ಹೂತಿಟ್ಟುಬಿಟ್ಟಿದ್ದಳು. ಆತ ರಾತ್ರಿಯಲ್ಲಿ ಬಾಟಲನ್ನು ಹುಡುಕಿದಾಗ ಸಿಗದೆ ಕೂಗಾಡಿ ರಂಪಾಟ ಮಾಡಿದ್ದ. ಇಂದು ಅದೇ ಬಾಟಲು ಉಪಯೋಗಕ್ಕೆ ಬರುವುದು.

ರೂಪಾಲಿ ಕೂಡಲೆ ಹೋಗಿ ಮಣ್ಣನ್ನು ಸರಿಸಿ ಬಾಟಲನ್ನು ಹೊರತೆಗೆದಳು ಮತ್ತು ಮಣ್ಣು ಅಂಟಿಕೊಂಡಿದ್ದ ಆ ಬಾಟಲನ್ನು ತೊಳೆದು ತಂದಳು. ಕೋಣೆಯನ್ನು ಸ್ವಚ್ಛಮಾಡಿ ಟೇಬಲ್, ಕುರ್ಚಿ ಹಾಕಿದಳು. ಟೇಬಲ್ ಮೇಲೆ ಬಾಟಲನ್ನು ಇಟ್ಟು ಇಂದು ನಾನು ನನ್ನ ಗಂಡನಿಗೆ ಖುಷಿಯಿಂದ ಕುಡಿಸುತ್ತೇನೆ. ಎಷ್ಟೋ ಸಮಯದ ನಂತರ ಆತ ಮನೆಗೆ ಮರಳುತ್ತಿದ್ದಾನೆ. ಕೂಡಲೇ ಆಕೆಗೆ ದೇವರ ನೆನಪಾಗಿ ಪಕ್ಕದಲ್ಲೇ ಇದ್ದ ಗುಡಿಗೆ ಹೋಗಿ ಪ್ರಾರ್ಥಿಸಿದಳು ...ಹೇ ಕೃಷ್ಣಾ, ನಾನು ನಿನ್ನನ್ನು ಸದಾ ಆರಾಧಿಸುತ್ತಿರುವೆ. ನಿನ್ನ ಹೆಸರಿನಲ್ಲಿ ವ್ರತ ಮಾಡಿರುವೆ. ಆದರೆ ಇಂದು ಮಾತ್ರ ನೀನು ನನ್ನನ್ನು ಕ್ಷಮಿಸಬೇಕು. ಇವತ್ತು ನಾನು ಧರ್ಮಭ್ರಷ್ಟಳಾಗುತ್ತಿದ್ದೇನೆ. ಇಂದು ನನ್ನ ಪತಿ ಬರುತ್ತಿದ್ದಾನೆ. ಅವನ ಖುಷಿಗಾಗಿ ನಾನೂ ಸಹ ಅವನೊಂದಿಗೆ ಶರಾಬು ಕುಡಿಯುತ್ತೇನೆ. ಇನ್ನಾದರೂ ನಾನು ಅವನೊಂದಿಗೆ ಬಾಳಬೇಕೆಂದೇ ನನ್ನ ಆಸೆ. ಆತನನ್ನು ನಾನು ಬಹುವಾಗಿ ಪ್ರೀತಿಸುತ್ತೇನೆ...

ಗುಡಿಯಿಂದ ಬಂದವಳೇ ಟೇಬಲ್ಲನ್ನು ಸರಿಪಡಿಸಿ ಆ ಬಾಟಲ್ ಜೊತೆಗೆ ಎರಡು ಲೋಟಗಳನ್ನು ಇಟ್ಟು ಅವುಗಳಿಗೆ ಶರಾಬು ಸುರಿದಳು. ಈಗ ಗಂಡನ ದಾರಿ ನೋಡತೊಡಗಿದಳು. ಕೂಡಲೆ ಆಕೆಗೆ ನೆನಪಾಯಿತು ...ಪತಿ ಶರಾಬಿಗೆ ಬರ್ಫ್‌ನ ತುಂಡುಗಳನ್ನೂ ಹಾಕುತ್ತಾನೆ. ಜೊತೆಗೆ ಸಿಗರೇಟನ್ನು ಸಹ ಸೇದುತ್ತಾನೆ. ಆದರೆ ಈಗ ಸಿಗರೇಟು, ಬರ್ಫಿನ ತುಂಡಿಗೆ ಏನು ಮಾಡುವುದು? ಸಿಗರೇಟು ಇಲ್ಲೇ ಗೂಡಂಗಡಿಯಲ್ಲಿ ಸಿಗಬಹುದು. ಆಕೆ ಸಿಗರೇಟು ತಂದಿಟ್ಟು, ಬರ್ಫ್ ಪೇಟೆಯಲ್ಲಿ ಸಿಗಬಹುದು ಎಂದು ಆ ಕಡೆಗೆ ಓಡಿದಳು.

ರೂಪಾಲಿ ಮನೆಯಿಂದ ಪೇಟೆಯ ಕಡೆಗೆ ಹೋದ ಸ್ವಲ್ಪ ಹೊತ್ತಿನಲ್ಲಿಯೇ ಆಕೆಯ ಪತಿ ಮನೆಯೊಳಗೆ ಪ್ರವೇಶಿಸಿದ. ಆತ ನೋಡಿದ... ಟೇಬಲ್ ಮೇಲೆ ನೀಟಾಗಿ ಶರಾಬಿನ ಬಾಟಲು, ಎರಡು ಗ್ಲಾಸುಗುಳು, ಸಿಗರೇಟ್ ಪಾಕೀಟು... ಎಲ್ಲವನ್ನು ಜೋಡಿಸಲಾಗಿದೆ... ಅವನಿಗೆ ಆಶ್ಚರ್ಯದ ಜೊತೆ ಜೊತೆಗೆ ಹುಚ್ಚು ಹಿಡಿದಂತಾಯಿತು. ಕ್ಷಣಹೊತ್ತು ನಿಂತ.

ತನ್ನ ಹೆಂಡತಿ ನೀತಿಗೆಟ್ಟವಳು ಎಂದು ತೀರ್ಮಾನಿಸಿ ಹಿಂತಿರುಗಿ ಹೋದ. ■



# ಮುಖವಾಡ

■ ಮೂಲ ಹಿಂದಿ: **ಅನಿತಾಜೋಷಿ**

ನಗರದ ಪ್ರತಿಷ್ಠಿತ ಮಹಿಳಾ ಸಂಘಟನೆಯ ಅಧ್ಯಕ್ಷೆಯಾದ ಶ್ರೀಮತಿ ಮಾಲತಿಯವರ ಭಾಷಣವನ್ನು ಕೇಳುವ ಅವಕಾಶ ನನಗೆ ಅನೇಕ ಸಾರಿ ದೊರೆತಿದೆ. ಮಾಲತಿಯವರ ವ್ಯಕ್ತಿತ್ವದಲ್ಲಿ ಶಾಂತಿ ಮತ್ತು ಕ್ರಾಂತಿಯ ಅದ್ಭುತ ಸಮನ್ವಯವಿತ್ತು. ಕೌಟುಂಬಿಕ ಸಮಸ್ಯೆ, ಭ್ರೂಣಹತ್ಯೆ, ಬಲಾತ್ಕಾರ, ಬಾಲ್ಯವಿವಾಹ, ವರದಕ್ಷಿಣೆ ಪಿಡುಗು ಮುಂತಾದ ಜ್ವಲಂತ ಸಮಸ್ಯೆಗಳನ್ನು ಕುರಿತಂತೆ ಅವರ ಭಾಷಣಗಳ ಧಾರಾಪ್ರವಾಹ ಜನರನ್ನು ಬಡಿದೆಬ್ಬಿಸುತ್ತಿತ್ತು. ಜೊತೆಗೆ ಅತಿ ಸಂವೇದನಾಶೀಲ ಸಂಗತಿಗಳು ಅವರ ಲೇಖನಿಯಿಂದ ಪುಂಖಾನುಪುಂಖವಾಗಿ ಲೇಖನಗಳಾಗಿ ಹೊರಬರುತ್ತಿದ್ದವು. ಚಳವಳಿ, ಧರಣಿ, ಸತ್ಯಾಗ್ರಹ, ಪೀಡಿತರ ಪರವಾದ ಅವರ ಕಾರ್ಯಶೈಲಿ ಎಲ್ಲವೂ ಸಮಾಜದ ಮೇಲೆ ಬೆಳಕು ಚೆಲ್ಲುವಂಥವುಗಳಾಗಿದ್ದವು.

ಹೀಗಿರುವಾಗ ಒಂದು ದಿನ ನಮ್ಮ ಹಳೆಯ ಮನೆಯ ಪಕ್ಕದ ನಿವಾಸಿ ಆಯಿಬಾಬಾ ಬಂದು ನನ್ನ ಬಳಿ ಹೇಳಿದರು. '...ನನ್ನ ಮಗ ಮತ್ತು ಸೊಸೆ ಮನೆಯಿಂದ ನನ್ನನ್ನು ಹೊರಗೆ ಹಾಕಿಬಿಟ್ಟಿದ್ದಾರೆ. ಈಗ ನನಗೆ ನ್ಯಾಯ ದೊರಕಿಸಿಕೊಡುವ ಒಂದೇ ಒಂದು ಆಶಾಕಿರಣವೆಂದರೆ ಶ್ರೀಮತಿ ಮಾಲತಿಯವರು ಮಾತ್ರ. ನೀವು ನನಗೆ ಈಗ ಸಹಾಯ ಮಾಡಬೇಕು.'

ಸರಿ, ನಾವು ನಿರ್ಧರಿತ ಸಮಯಕ್ಕೆ ಸರಿಯಾಗಿ ಮಾಲತಿಯವರ ಬಂಗಲೆ ಎದುರಿನ ಸುಂದರ ಮತ್ತು ಕಲಾತ್ಮಕ ಗಾರ್ಡನ್ ದಾಟಿ ಮನೆಯ ದ್ವಾರದ ಬಳಿ ತಲುಪಿದಾಗ ದ್ವಾರದ ಪಕ್ಕದಲ್ಲಿದ್ದ ನಗುವ ಮುಖವಾಡ ನನ್ನನ್ನು ಬಹುವಾಗಿ ಆಕರ್ಷಿಸಿತು. ಅದರ ಮಧ್ಯದಲ್ಲಿನ ಕರೆಗಂಟೆಯನ್ನು ಒತ್ತಿದಾಗ ಸ್ವತಃ ಮಾಲತಿಯವರೇ ಬಂದು ಎದುರು ನಿಂತರು. ಅವರ ಹಸನ್ಮುಖ ವ್ಯಕ್ತಿತ್ವದ ಜೊತೆಗೆ ಅವರ ಸೌಂದರ್ಯಪ್ರಜ್ಞೆಯೂ ಎದ್ದು ಕಾಣುತ್ತಿತ್ತು. ನಮ್ಮನ್ನು ಒಳಕ್ಕೆ ಬರಮಾಡಿಕೊಂಡು ತಮ್ಮ ಪರಿವಾರದವರಿಗೆ ಪರಿಚಯ ಕೂಡ ಮಾಡಿದರು.

ಆಯಿಬಾಬಾರ ಸಮಸ್ಯೆಯನ್ನು ಆಲಿಸಿದಾಗ ಮಾಲತಿಯವರ ಕಣ್ಣಂಚಿನಲ್ಲಿ ನೀರು ಜಿನುಗಿತು. ವೃದ್ಧರ ಸದ್ಯದ ಪರಿಸ್ಥಿತಿಯ ಬಗ್ಗೆ ಆರ್ದ್ರ ಹೃದಯದಿಂದಲೇ ಅವರು ಅನುಕಂಪ ವ್ಯಕ್ತಪಡಿಸುತ್ತ ಆಯಿಬಾಬಾರ ಸಮಸ್ಯೆಯನ್ನು ಪರಿಹರಿಸಿಕೊಡುವ ಆಶ್ವಾಸನೆ ನೀಡಿದರು. ನಾವು ಕೃತಜ್ಞತಾ ಭಾವದಿಂದ ನಮಸ್ಕರಿಸಿ ಹೊರಬಂದೆವು.

ಸ್ವಲ್ಪ ದೂರ ಬಂದ ನಂತರ ನನಗೆ ನೆನಪಾಯಿತು. ನಾನು ನನ್ನ ಕನ್ನಡಕವನ್ನು ಮಾಲತಿಯವರ ಮನೆಯ ಸೋಫಾದ ಮೇಲೆಯೇ ಬಿಟ್ಟುಬಂದಿದ್ದೆ. ಕೂಡಲೇ ಹಿಂತಿರುಗಿ ಹೋಗಿ ಮಾಲತಿಯವರ ಮನೆಯ ಬಾಗಿಲ ಪಕ್ಕದ ಕರೆಗಂಟೆಗೆ ಕೈಹಾಕಿ ಅದನ್ನು ಒತ್ತಬೇಕು ಎನ್ನುವಷ್ಟರಲ್ಲಿ ಒಳಗಿನಿಂದ ಮಾಲತಿಯವರ ಏರುಧ್ವನಿಯ ಮಾತುಗಳು ಕೇಳಿಸಿದವು...

'ಅರೇ, ಹೊರಗಿನವರು ನನ್ನನ್ನು ಭೇಟಿಯಾಗಲು ಬಂದಾಗ ಸ್ವಲ್ಪ ನಗುಮುಖದಿಂದ ಇದ್ದು ಸಭ್ಯ ರೀತಿಯಲ್ಲಿ ಕಾಣಿಸಿಕೊಳ್ಳಬೇಕೆಂದು ಎಷ್ಟು ಬಾರಿ ನಿನಗೆ ಹೇಳಬೇಕು? ನಾನಾದ್ದರಿಂದ ನನ್ನ ಪ್ರತಿಷ್ಠೆ, ಗೌರವಕ್ಕಾಗಿ ನಿನಗೆ ಊಟ, ಬಟ್ಟೆಯ ಅನುಕೂಲ ಒದಗಿಸಿದ್ದೇನೆ... ನಿನ್ನಂತಹ ವೃದ್ಧರು ಬೀದಿ ಬೀದಿ ಅಲೆಯುತ್ತ ನರಕಯಾತನೆ ಪಡುತ್ತಿರುವುದು ನಿನಗೆ ಗೊತ್ತಿಲ್ಲವೆ?'

ಮುಂದಿನ ಶಬ್ದಗಳು ಆ ವೃದ್ಧೆಯ ಅಳು ಮತ್ತು ಬಿಕ್ಕಳಿಕೆಯಲ್ಲಿ ಲೀನವಾಗಿ ಹೋದವು. ನಾನು ನನ್ನ ಕಾಲುಗಳು ಮರಗಟ್ಟಿ ಹೋದಂತಾಗಿ ಆ ಕರೆಗಂಟೆಯ ಮುಖವಾಡವನ್ನೇ ನೋಡುತ್ತ ನಿಂತುಬಿಟ್ಟೆ.

ಪ್ರತಿಕ್ರಿಯಿಸಿ: feedback@sudha.co.in